# ನಿರುದ್ಯೋಗ

ಜಗತ್ತಿನಲ್ಲಿರುವ ಅನೇಕ ಸಮಸ್ಯೆಗಳಲ್ಲಿ ಒಂದು 'ನಿರುದ್ಯೋಗ' ಸಮಸ್ಯೆ. ನಿರುದ್ಯೋಗ ಎಂದರೆ ಉದ್ಯೋಗವಿಲ್ಲದಿರುವುದು. ಇಂದಿನ ಪರಿಸ್ಥಿತಿಯಲ್ಲಿ ಎಲ್ಲಾ ದೇಶಗಳಲ್ಲೂ ಚೆನ್ನಾಗಿ ಓದಿ ಪದವೀಧರರಾದರೂ ಕೆಲಸಕ್ಕೆ ಕಷ್ಟ ಪಡುತ್ತಿದ್ದಾರೆ. ಬೇರೆ ತರಹದ ಕೆಲಸಗಳ ಅರಿವಿಲ್ಲದಿರುವುದು ಅಥವಾ ಬೇರೆ ಕೆಲಸಗಳನ್ನು ಮಾಡುವ ಮನಸ್ಸಿಲ್ಲದಿರುವುದು ಇದಕ್ಕೆ ಮುಖ್ಯ ಕಾರಣವೂ ಹೌದು.

ನಿರುದ್ಯೋಗವು ಒಬ್ಬರ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರಬಹುದು. ನಿರುದ್ಯೋಗಿಗಳು ಕೆಲಸವಿಲ್ಲದೆ ಮನೋರೋಗಕ್ಕೆ ಗುರಿಯಾಗುತ್ತಿದ್ದಾರೆ. ಕುಟುಂಬದ ಜವಾಬ್ದಾರಿಗಳನ್ನು ಹೊರಲು ಆಗುತ್ತಿಲ್ಲ. ಇದಕ್ಕೆ ಸರ್ಕಾರ ಹಾಗೂ ಖಾಸಗಿ ಕಂಪನಿಗಳು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸಬೇಕು. ಹಾಗೇ ನಿರುದ್ಯೋಗಿಗಳು ತಾವೇ ವಿಚಾರ ಮಾಡಿ ಸ್ವಂತ ವ್ಯಾಪಾರ ವ್ಯವಹಾರಗಳನ್ನು ಆರಂಭಿಸಬೇಕು. ತಮ್ಮ ವಿಚಾರಗಳನ್ನು ಜಗತ್ತನ್ನು ನೋಡುವ ರೀತಿಯನ್ನು ಬದಲಿಸಬೇಕು ಹಾಗೂ ಈ ನಿರುದ್ಯೋಗ ಸಮಸ್ಯೆಯನ್ನು ನೀಗಿಸಬೇಕು.

FOR KANNADA
ಕನ್ನಡಕ್ಕಾಗಿ ಇಲ್ಲಿ ಬನ್ನಿ